## ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

## ಎಸ್.ಸಿ ಸಂಖ್ಯೆ– 265/2023

| | | | |
|---|---|---|---|
| **ಸಾಕ್ಷಿದಾರನ ಹೆಸರು** | : | ಜಗನ್ನಾಥ ಡಿ. | **ಪಿ.ಡಬ್ಲ್ಯೂ**– 15 |
| **ತಂದೆಯ ಹೆಸರು** | : | ದೊಡ್ಡಯ್ಯ | **ಸಿ.ಡಬ್ಲ್ಯೂ**– 39 |
| **ವಯಸ್ಸು** | : | 47 ವರ್ಷ | |
| **ಉದ್ಯೋಗ** | : | ವೈದ್ಯಾಧಿಕಾರಿ, ಕೆ.ಆರ್.ಆಸ್ಪತ್ರೆ, ಮೈಸೂರು. | |
| **ವಾಸಸ್ಥಳ** | : | ಮೈಸೂರು. | |

**ಸಾಕ್ಷಿಯನ್ನು ಈ ದಿನ ದಿಃ18.06.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

**1.** ನಾನು 2011 ರಿಂದ ಇಲ್ಲಿಯವರೆಗೆ ಕೆ.ಆರ್.ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದೇನೆ.

**2.** ದಿಃ– **27.06.2023** ರಂದು ಮದ್ಯಾಹ್ನ **3.35** ಕ್ಕೆ ಶಿವರಾಜು ಎಂಬುವವರನ್ನು ವಿದ್ಯಾರಣ್ಯಂಪುರಂ ಪೊಲೀಸ್ ಠಾಣೆಯಿಂದ ಪಿಸಿಃ–**1130** ರಮೇಶ್ ಎನ್ನುವವರು ವೈದ್ಯಕೀಯ ಪರೀಕ್ಷೆಗಾಗಿ ಕರೆದುಕೊಂಡು ಬಂದಿದ್ದರು. ಅವರನ್ನು ವಿಚಾರಿಸಿದಾಗ, ಅವರ ಮೇಲೆ ದಿಃ– **21.06.2023** ರ ರಾತ್ರಿ **8.30** ರ ಸುಮಾರಿಗೆ ನಾಗಲೋಕ ವೈನ್ ಶಾಪ್ ಹತ್ತಿರ ಹಲ್ಲೆ ಆಗಿದೆ ಎಂದು ಹೇಳಿಕೆ ನೀಡಿದ್ದರು. ಅವರನ್ನು ಪರೀಕ್ಷಿಸಲಾಗಿ ಅವರ ಕತ್ತಿನ ಭಾಗದಲ್ಲಿ ಗುಣಮುಖವಾದ ತರಚಿದ ಗಾಯ ಇರುವುದು ಕಂಡು ಬಂದಿರುತ್ತದೆ. ಹೆಚ್ಚಿನ ಪರೀಕ್ಷೆಗೆ ಪ್ರಥಮ ಚಿಕಿತ್ಸಾ ವಿಭಾಗಕ್ಕೆ ಕಳುಹಿಸಿದ್ದೆ.

**3.** ದಿಃ– **20.07.2023** ರಂದು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದೇನೆ. ಆ ವ್ಯಕ್ತಿಗೆ ಆಗಿದ್ದ ಗಾಯ ಸಾಮಾನ್ಯ ಸ್ವರೂಪದ ಗಾಯ ಎಂದು ಅಭಿಪ್ರಾಯ ನೀಡಿದ್ದೇನೆ. ಈ ಗಾಯದ ಪ್ರಮಾಣ ಪತ್ರ ನೀಡುವಾಗ ಒಪಿಡಿ ಸ್ಲಿಪನ್ನು ಮತ್ತು ಎಂ.ಎಲ್.ಸಿ ರಿಜಿಸ್ಟರನ್ನು ಪರಿಶೀಲನೆ ಮಾಡಿದ್ದೇನೆ.

**4.** ಈಗ ನಾನು ನೋಡುತ್ತಿರುವ ಗಾಯದ ಪ್ರಮಾಣ ಪತ್ರ ಅದೇ ಇದೆ. ಸದರಿ ಗಾಯದ ಪ್ರಮಾಣ ಪತ್ರದಲ್ಲಿ ನನ್ನ ಸಹಿ ಇದೆ. ಅದನ್ನು ನಿಶಾನೆ ಪಿ–51 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–51(ಎ) ಎಂದು ಗುರುತಿಸಲಾಯಿತು. ಆ ಗಾಯವು 72 ಗಂಟೆಗೂ ಮೊದಲು ಮತ್ತು ಒಂದು ವಾರದ ಒಳಗಡೆ ಆಗಿರುವ ಸಾಧ್ಯತೆ ಇದೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಜ್ಯೋತಿ ವಕೀಲರಿಂದಃ–</u>**

**5.** ಆ ವ್ಯಕ್ತಿಗೆ ಯಾವುದೇ ಗಾಯ ಆಗಿರಲಿಲ್ಲ ಎಂದರೆ ಸರಿಯಲ್ಲ. ನಿಶಾನೆ ಪಿ–51 ರಲ್ಲಿ ಹೇಳಿರುವ ಗಾಯ ತುಂಬಾ ಹಳೆಯ ಗಾಯ ಆಗಿತ್ತೆಂದರೆ ಸರಿಯಲ್ಲ. ತನಿಖಾಧಿಕಾರಿಯ ಹೇಳಿಕೆ ಮೇರೆಗೆ ಆ ವ್ಯಕ್ತಿಗೆ ಆಗಿದ್ದ ಗಾಯ 72 ಗಂಟೆಗೂ ಮೊದಲು ಮತ್ತು ಒಂದು ವಾರದ ಒಳಗಡೆ ಆಗಿರುವ ಸಾಧ್ಯತೆ ಇದೆ ಎಂದು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ– ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೇ ಸ ಇ ಎ ಒ**

**Sd/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಮೈಸೂರು.**